ಅಕ್ಷರಾ ಮೋಟಾರ್ಸ್ - ಕಾವೇರಿ ಮೋಟರ್ಸ್‌ನ ಘಟಕ
ಸಂಪರ್ಕಿಸಿ : +91 9900025519

ಆಂದೋಲನ

ದಿನಪತ್ರಿಕೆ

ಸಂಪಾದಕ : ರಾಜಶೇಖರ ಕೋಟಿ

ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand Mysuru - 01
Tandoori Chinese Sea Food
Ph: 0821 - 4191009, 2430241
90082 85555
FREE HOME DELIVERY
Parking Available

ಬಿಜೆಪಿ ಮುಖಂಡ ಎಚ್.ವಿ.ರಾಜೀವ್ ಅವರ ನೇತೃತ್ವದಲ್ಲಿ ನಿರಂತರವಾಗಿ ೧೮೦ನೇ ಸ್ವಚ್ಛತಾ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಈ ಅಪೂರ್ವ ದಾಖಲೆ ಈಗ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಶನಿವಾರ ಸೇರ್ಪಡೆಗೊಂಡಿತು.

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸ್ವಚ್ಛತಾ ಅಭಿಯಾನ

ವೀರಶೈವ-ಲಿಂಗಾಯತ ಧರ್ಮದಲ್ಲಿ ಒಡಕು ಸಲ್ಲ...

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಗುರು ವಿರಕ್ತರೆಲ್ಲರೂ ಒಗ್ಗಟ್ಟಿನಿಂದ ನಡೆದು ವೀರಶೈವ ಲಿಂಗಾಯತ ಸಂಸ್ಕೃತಿ ಎತ್ತಿ ಹಿಡಿಯಬೇಕು. ನಮ್ಮ ನಮ್ಮಲ್ಲೇ ಒಡಕು ಸಲ್ಲ ಎಂದು ಶ್ರೀ ಡಾ.ಶಿವಕುಮಾರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಸಂಪುಟ: ೪೬ ಸಂಚಿಕೆ: ೨೩೬, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೨ ✪ ದ್ವಾದಶಿ– ಉತ್ತರಾಷಾಢ, ಭಾನುವಾರ, ಸೆ.೩, ೨೦೧೭, ದೂರವಾಣಿ: ೨೪೪೯೫೦೧, ೨೪೪೯೫೦೮, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ: ೧೨+೪, ರೂ. ೩

೧೦೦ ಅಡಿ ಮುಟ್ಟಿದ ಕೆಆರ್‌ಎಸ್

೧೦ ದಿನಗಳಲ್ಲಿ ೧೦ ಅಡಿ ನೀರು; ಆತಂಕ ದೂರ ಮಾಡಿದ ವರುಣ

ಮೈಸೂರು,ಸೆ.೨– ಕೆಲ ದಿನಗಳಿಂದ ಸುರಿದ ಮಳೆಯಿಂದಾಗಿ ಕಾವೇರಿ ನದಿಯ ಒಳಹರಿವು ಹೆಚ್ಚಾಗಿದ್ದು ಕೃಷ್ಣರಾಜಸಾಗರ ಜಲಾಶಯದ ಮಟ್ಟ ೧೦೦ ಅಡಿಗೆ ತಲುಪಿದೆ. ಇದರಿಂದ ಮಂಡ್ಯ, ಮೈಸೂರು ಭಾಗದ ರೈತರಲ್ಲಿ ಮನೆಮಾಡಿದ್ದ ಆತಂಕ ದೂರವಾದಂತಾಗಿದೆ.

ಶನಿವಾರ ಸಂಜೆ ೬ ಗಂಟೆ ವೇಳೆಗೆ ೯೯.೪೫ ಅಡಿ ನೀರಿನ ಮಟ್ಟ ತಲುಪಿದ್ದು, ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿದ್ದು, ಬಹುತೇಕ ರಾತ್ರಿ ೧೦೦ ಅಡಿ ಮುಟ್ಟುವುದನ್ನು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಸತತ ೨ ವರ್ಷಗಳ ಕಾಲ ಬರಗಾಲ ಅನುಭವಿಸಿರುವ ರಾಜ್ಯದ ಜನತೆಗೆ ಮತ್ತೊಮ್ಮೆ ಸಂಕಷ್ಟ ಎದುರಾಗುವ ಭೀತಿ ತಲೆದೋರಿತ್ತು. ಮುಂಗಾರು ಕೈಕೊಟ್ಟು ಕಳೆದ ೬ ವರ್ಷಗಳಲ್ಲಿ ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟ ಮತ್ತೆ ಕನಿಷ್ಠ ಮಟ್ಟಕ್ಕೆ ಕುಸಿಯುವ ಪರಿಸ್ಥಿತಿ ಉಂಟಾಗಿತ್ತು. ಆದರೆ ಕಳೆದ ೧೫ ದಿನಗಳಿಂದ ಬರುತ್ತಿರುವ ಮಳೆ ಚಿತ್ರಣವನ್ನೇ ಬದಲಾಯಿಸಿಬಿಟ್ಟಿತು.

ಜಲಾಶಯಕ್ಕೆ ಹರಿದುಬರುತ್ತಿರುವ ನೀರಿನ ಪ್ರಮಾಣವೂ ಸಾಕಷ್ಟು ಪ್ರಮಾಣದಲ್ಲಿ ವೃದ್ಧಿಸಿದೆ. ಮಳೆಯ ಪರಿಸ್ಥಿತಿ ಗಮನಿಸಿದರೆ ಈ ಬಾರಿ ಕೃಷ್ಣರಾಜಸಾಗರ ಜಲಾಶಯ ೧೦೫–೧೦೮ ಅಡಿ ತಲುಪುವ ಸಾಧ್ಯತೆಗಳಿವೆ.

ಶನಿವಾರ (ಸೆ.೨) ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟ ೧೦೦ ಅಡಿ (ಗರಿಷ್ಠ ೧೨೪.೮೦ ಅಡಿ) ತಲುಪಿದೆ. ಜಲಾಶಯಕ್ಕೆ ೧೨,೩೬೫ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ೮,೦೦೦ ಕ್ಯೂಸೆಕ್ಸ್ ನೀರು ಹೊರ ಬಿಡಲಾಗುತ್ತಿದೆ. ಕಳೆದ ವರ್ಷ ಇದೇ ದಿನ ೯೨.೮೦ ಅಡಿ ನೀರಿತ್ತು. ೪೩೪೭ ಕ್ಯೂಸೆಕ್ಸ್ ಒಳ ಹರಿವು ಇದ್ದು ೧೪೯೬ ಕ್ಯೂಸೆಕ್ಸ್ ಹೊರ ಹರಿವು ಇತ್ತು.

ಜುಲೈ ೧೭ರಂದು ಜಲಾಶಯದಲ್ಲಿ ಕಳೆದ ೬ ವರ್ಷದಲ್ಲಿ ಕನಿಷ್ಠ ಎನ್ನಬಹುದಾದ ೭೮.೧೭ ಅಡಿ ನೀರು ಸಂಗ್ರಹವಾಗಿತ್ತು. ಆಣೆಕಟ್ಟೆಗೆ ೧೭,೮೬ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದರೆ, ೨೧೧೨ ಕ್ಯೂಸೆಕ್ಸ್ ನೀರನ್ನು ಹೊರ ಬಿಡಲಾಗುತ್ತಿತ್ತು. ಜಲಾಶಯದಲ್ಲಿ ೧೦.೧ ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಾಗಿತ್ತು. ಇದು ಆತಂಕಕ್ಕೆ ಕಾರಣವಾಗಿತ್ತು.

ಆದರೆ, ವರುಣ ಮತ್ತೆ ಅಬ್ಬರಿಸಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಆದ ಹಿನ್ನೆಲೆಯಲ್ಲಿ ಒಳ ಹರಿವು ಹೆಚ್ಚಾಗಿ ಜಲಾಶಯ ೧೦೦ ಅಡಿ ದಾಟಲು ಕಾರಣವಾಯಿತು. ಜಲಾಶಯಕ್ಕೆ ೧೯,೮೯೪ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ಕೆರೆ–ಕಟ್ಟೆಗಳೂ ತುಂಬುತ್ತಿವೆ.

ಕೆಆರ್‌ಎಸ್ ಜಲಾಶಯಕ್ಕೆ ಕಳೆದ ೧೦ ದಿನಗಳ ಅವಧಿಯಲ್ಲಿ ೧೦ ಅಡಿಯಷ್ಟು ನೀರು ಹರಿದು ಬಂದಿದೆ. ಈ ನಡುವೆ ನಾಲೆಗಳ ಮೂಲಕ ಕೆರೆ, ಕಟ್ಟೆಗಳು ಹಾಗೂ ಅಲ್ಪಾವಧಿ ಬೆಳೆಗೆ ನೀರನ್ನು ಬಿಡಲಾಗಿದೆ. ತಮಿಳುನಾಡಿಗೂ ಸಾಕಷ್ಟು ನೀರು ಹರಿದು ಹೋಗಿದೆ.

ರೈತರ ಮುಖದಲ್ಲಿ ಮಂದಹಾಸ: ಕಳೆದ ವರ್ಷ ಕೃಷ್ಣರಾಜ ಸಾಗರ ಜಲಾಶಯ ಭರ್ತಿಯಾಗದೆ ಯಾವುದೇ ಬೆಳೆ ಬೆಳೆದಿರಲಿಲ್ಲ.

⏭ ೮

ಕೆಆರ್‌ಎಸ್	
ಗರಿಷ್ಠ ಮಟ್ಟ	೧೨೪.೮೦ ಅಡಿ
ಇಂದಿನ ಮಟ್ಟ	೧೦೦ ಅಡಿ
ಒಳಹರಿವು	೧೨,೩೬೫ ಕ್ಯೂಸೆಕ್ಸ್
ಹೊರ ಹರಿವು	೮೦೦೦ ಕ್ಯೂಸೆಕ್ಸ್

ಹಾರಂಗಿ	
ಗರಿಷ್ಠ ಮಟ್ಟ	೨೮೫೯ ಅಡಿ
ಇಂದಿನ ಮಟ್ಟ	೨೮೫೭.೮೮ ಅಡಿ
ಒಳಹರಿವು	೩,೨೦೦ ಕ್ಯೂಸೆಕ್ಸ್
ಹೊರ ಹರಿವು	೩,೦೦೦ ಕ್ಯೂಸೆಕ್ಸ್

ಅಕ್ಟೋಬರ್‌ವರೆಗೂ ವರುಣನ ಸಿಂಚನ?

ರಾಜ್ಯದಲ್ಲಿ ನಿರೀಕ್ಷಿತ ಪ್ರಮಾಣದ ಮಳೆ ಆಗುತ್ತಿಲ್ಲ ಎಂದು ಆತಂಕ ಶುರುವಾಗಿರುವಾಗಲೇ ಹವಾಮಾನ ಇಲಾಖೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಮಳೆ ಅಕ್ಟೋಬರ್ ತನಕ ಮುಂದುವರಿಯಲಿದೆ ಎಂದು ತಿಳಿಸಿದೆ.

ಕಬಿನಿ	
ಗರಿಷ್ಠ ಮಟ್ಟ	೨೨೪ ಅಡಿ
ಇಂದಿನ ಮಟ್ಟ	೨೨೭.೧೫ ಅಡಿ
ಒಳಹರಿವು	೮೦೦೦ ಕ್ಯೂಸೆಕ್ಸ್
ಹೊರ ಹರಿವು	೩,೫೦೦ ಕ್ಯೂಸೆಕ್ಸ್

ಹೇಮಾವತಿ	
ಗರಿಷ್ಠ ಮಟ್ಟ	೨೯೨೨ ಅಡಿ
ಇಂದಿನ ಮಟ್ಟ	೨೮೯೪.೫೦ ಅಡಿ
ಒಳಹರಿವು	೫೯೮೦ ಕ್ಯೂಸೆಕ್ಸ್
ಹೊರ ಹರಿವು	೨೫,೪೪೭ ಕ್ಯೂಸೆಕ್ಸ್

ಹಳೇ ಮೈಸೂರು ಭಾಗಕ್ಕೆ ಈ ಬಾರಿ ಕುಡಿಯುವ ನೀರಿರಿಲ್ಲ ತೊಂದರೆ

ರಾಜ್ಯದ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಭಾಗ್ಯ

ಮುಂದಿನ ಶೈಕ್ಷಣಿಕ ವರ್ಷದಿಂದ ಯೋಜನೆ ಜಾರಿ

ಬೆಂಗಳೂರು,ಸೆ.೨– ಬಡವರ, ಶೋಷಿತರ, ನೊಂದ ಸಮುದಾಯಗಳ ಅಭ್ಯುದಯಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಈಗಾಗಲೇ ಹಲವಾರು 'ಭಾಗ್ಯ'ಗಳನ್ನು ನಾಡಿನ ಜನತೆಗೆ ಕೊಟ್ಟಿದ್ದು, ಇದೀಗ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದಲ್ಲೂ ಉಚಿತ ಶಿಕ್ಷಣ ನೀಡುವ ಮಹತ್ವಾಕಾಂಕ್ಷಿ 'ಶಿಕ್ಷಣ ಭಾಗ್ಯ' ಯೋಜನೆ ಜಾರಿ ಮಾಡಲು ತೀರ್ಮಾನಿಸಿದೆ.

ಈ ನೂತನ ಯೋಜನೆ ಪ್ರಕಾರ, ಮುಂದಿನ ಶೈಕ್ಷಣಿಕ ವರ್ಷದಿಂದ ಹೆಣ್ಣು ಮಕ್ಕಳಿಗೆ ಸ್ನಾತಕೋತ್ತರ ಪದವಿಯ ತನಕ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ನೀಡಲು ಸರ್ಕಾರ ಮುಂದಾಗಿದೆ.

- ೧೮ ಲಕ್ಷ ಹೆಣ್ಣು ಮಕ್ಕಳಿಗೆ ಅನುಕೂಲ
- ಸುಮಾರು ೧೧೦ ಕೋಟಿ ರೂ. ಯೋಜನೆ

ರಾಜ್ಯದಲ್ಲಿನ ಹೆಣ್ಣು ಮಕ್ಕಳನ್ನು ಸಬಲೀಕರಣಗೊಳಿಸುವ ನಿಜ್ಜನ್ನಲ್ಲಿ ರಾಜ್ಯ ಸರ್ಕಾರ ಹೆಣ್ಣು ಮಕ್ಕಳ ಉಚಿತ ಶಿಕ್ಷಣ ಕ್ಕಾಗಿ 'ಶಿಕ್ಷಣ ಭಾಗ್ಯ' ಎಂಬ ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ.

–ಬಸವರಾಜ ರಾಯರೆಡ್ಡಿ, ಉನ್ನತ ಶಿಕ್ಷಣ ಸಚಿವ

ಈ ಸಂಬಂಧ ಮುಂದಿನ ಅಧಿವೇಶನದ ಶಿಕ್ಷಣ ಕಾರ್ಯಗೆಗೆ ತಿದ್ದುಪಡಿ ತಂದು ೨೦೧೯ ಜೂನ್ ತಿಂಗಳಿನಿಂದ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಉಚಿತ ಶಿಕ್ಷಣ ದೊರೆಯಲಿದೆ.

ಪೋಷಕರ ವಾರ್ಷಿಕ ಆದಾಯ ೧೦ ಲಕ್ಷ ರೂ.ಗಿಂತ ಕಡಿಮೆ ಇರುವ ಸುಮಾರು ೧೮ ಲಕ್ಷ ಹೆಣ್ಣು ಮಕ್ಕಳಿಗೆ ಇದರಿಂದ ಪ್ರಯೋಜನವಾಗಲಿದೆ.

ಈಗಾಗಲೇ ನೆರೆಯ ತೆಲಂಗಾಣ ರಾಜ್ಯದಲ್ಲಿ ಹೆಣ್ಣು ಮಕ್ಕಳಿಗೆ ಎಲ್‌ಕೆಜಿಯಿಂದ ಸ್ನಾತಕೋತ್ತರ ಪದವಿವರೆಗೆ ಉಚಿತವಾಗಿ ಶಿಕ್ಷಣ ನೀಡಲಾಗುತ್ತಿದೆ. ಇತ್ತೀಚೆಗಷ್ಟೇ ಪಂಜಾಬ್ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಪಿಎಚ್.ಡಿ ವರೆಗೂ ಉಚಿತ ಶಿಕ್ಷಣ ನೀಡುವ ಘೋಷಣೆ ಮಾಡಿದೆ.

⏭ ೮

ಯಾವುದೇ ಭಿನ್ನಮತ ಇಲ್ಲ: ಸಿಎಂ

ಬೆಂಗಳೂರು,ಸೆ.೨– 'ಕೆಪಿಸಿಸಿ ಅಧ್ಯಕ್ಷ ಡಾ.ಜಿ. ಪರಮೇಶ್ವರ್ ಹಾಗೂ ನನ್ನ ನಡುವೆ ಯಾವುದೇ ಭಿನ್ನಮತ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಬೆಂಬಲಕ್ಕೆ ನಿಂತ ಇಂಧನ ಸಚಿವ ಡಿ.ಕೆ.ಶಿವಕುಮಾರ್

ಗೃಹ ಕಚೇರಿ ಕಾವೇರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಮಾಣ ವಚನ ಸ್ವೀಕಾರದ ದಿನ ಡಾ.ಜಿ.ಪರಮೇಶ್ವರ್ ದಿಲ್ಲಿಗೆ ಹೋಗಿದ್ದರು. ಹಾಗಾಗಿ ಕಾರ್ಯಕ್ರಮಕ್ಕೆ ಬಂದಿರಲಿಲ್ಲ ಎಂದು ಸಮರ್ಥಿಸಿಕೊಂಡರು.

ಆದರೆ, ಪರಮೇಶ್ವರ್ ಅಂದು ಬೆಂಗಳೂರಿನಲ್ಲೇ ಇದ್ದರು ಎಂದು ವರದಿಗಾರರು ಗಮನ ಸೆಳೆದಾಗ, ಪರಮೇಶ್ವರ್ ಅವರು ಬೆಂಗಳೂರಿನಲ್ಲಿರುವುದು ನನಗೆ ಗೊತ್ತಿಲ್ಲ. ಹಾಗಿದ್ದರೆ ಅವರನ್ನೇ ಹೋಗಿ ಕೇಳಿ ಎಂದು ಸಿಟ್ಟಿನಿಂದ ಹೇಳಿದರು.

⏭ ೮

ಇಂದು ಕೇಂದ್ರ ಸಂಪುಟ ಪುನಾರಚನೆ

ಹೊಸದಿಲ್ಲಿ: ಬಹು ನಿರೀಕ್ಷಿತ ಕೇಂದ್ರ ಸಂಪುಟ ಪುನಾರಚನೆಯು ಸೆ.೫ರಂದು ನಡೆಯಲಿದ್ದು, ರಾಷ್ಟ್ರಪತಿ ಭವನದ ಅಶೋಕ ಹಾಲ್ ಸಿದ್ಧವಾಗಿದೆ.

ಈಗಾಗಲೇ ೭ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು, ಹೊಸ ಮುಖಗಳಿಗೆ ಅದ್ಧತೆ ಸಿಗುವ ಸಂಭವ ಹೆಚ್ಚಿದೆ. ಕರ್ನಾಟಕದಿಂದ ಉತ್ತರ ಕನ್ನಡ ಸಂಸದ ಅನಂತ್‌ಕುಮಾರ್ ಹೆಗಡೆ ಸಂಪುಟ ಸೇರ್ಪಡೆ ಖಚಿತ ಎಂದು ಹೇಳಲಾಗುತ್ತಿದೆ.

⏭ ಪುಟ ೮

ಗಣಪತಿ ವಿಸರ್ಜನೆ; ಇಬ್ಬರು ನೀರುಪಾಲು

ಪಿರಿಯಾಪಟ್ಟಣ ತಾಲ್ಲೂಕಿನ ವಿ.ಜಿ.ಕೊಪ್ಪಲು ಗ್ರಾಮದಲ್ಲಿ ಹೃದಯವಿದ್ರಾವಕ ದುರ್ಘಟನೆ

ಪಿರಿಯಾಪಟ್ಟಣ,ಸೆ.೨– ಗಣಪತಿ ವಿಸರ್ಜನೆಗೆ ತೆರಳಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ತಾಲ್ಲೂಕಿನ ವಿ.ಜಿ.ಕೊಪ್ಪಲು ಗ್ರಾಮದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ.

ಗ್ರಾಮದ ಮಂಜುನಾಥ್ (೧೬) ಮತ್ತು ಮಹೇಶ್ (೨೫) ಮೃತ ಯುವಕರು.

ಗಣಪತಿ ಹಬ್ಬದ ಪ್ರಯುಕ್ತ ಗ್ರಾಮದಲ್ಲಿ ಕೂರಿಸಲಾಗಿದ್ದ ಗಣಪತಿ ಮೂರ್ತಿಯನ್ನು ಶನಿವಾರ ಬೆಳಗ್ಗೆ ಗ್ರಾಮಸ್ಥರೆಲ್ಲರೂ ಗ್ರಾಮದ ವಡ್ಡರಕೆರೆಯಲ್ಲಿ ವಿಸರ್ಜಿಸಲು ತೆರಳಿದ್ದಾರೆ. ಈ ಸಂದರ್ಭದಲ್ಲಿ ನೀರಿಗೆ ಇಳಿದಿದ್ದ ಐವರು ಯುವಕರಲ್ಲಿ ಈಜು ಬಾರದ ಮಂಜುನಾಥ್ ಹಾಗೂ ಮಹೇಶ್

ಮಂಜುನಾಥ್

ಮಹೇಶ್

ಆಳ ಗುರುತಿಸಲಾಗದೆ ಮುಳುಗಿ ಮೃತಪಟ್ಟಿದ್ದಾರೆ.

ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ, ಹುಣಸೂರು ತಾಲ್ಲೂಕಿನ ಕಲ್ಲುಣಿಕೆ ಗ್ರಾಮದ ಈಜು ಪರಿಣಿತ ಮಹೇಂದ್ರ ಅವರ ನೆರವಿನಿಂದ ಶವಗಳನ್ನು ಹೊರತೆಗೆದು 'ಎಂಎಲ್' ವಾಹನದಲ್ಲಿ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ತಂದಿದ್ದಾರೆ.

ಶವಾಗಾರದ ಬಳಿ ಆಗಮಿಸಿದ ಎಎಸ್‌ಪಿ ಎನ್.ರುದ್ರಮುನಿ, ಡಿವೈಎಸ್‌ಪಿ ಎನ್.ಜಿ.ಭಾಸ್ಕರ್ ರೈ, ಸಿಪಿಐ ಎಚ್.ಎನ್.ಸಿದ್ದಯ್ಯ, ಪಿಎಸ್‌ಐ ಎಸ್.ಎಸ್. ರವಿಕಿರಣ್ ಮಾಹಿತಿ ಪಡೆದರು.

ಎಎಸ್‌ಪಿಯಿಂದ ತರಾಟೆ: ಗಣಪತಿ ವಿಸರ್ಜನೆಗೆ ತಾಲ್ಲೂಕಿನಾದ್ಯಂತ ಆ.೩೧ಕ್ಕೆ ಅಂತಿಮ ಗಡುವು ನೀಡಲಾಗಿತ್ತು.

⏭ ೮

ಅನಿರೀಕ್ಷಿತ... ನಿಭಾಯಿಸುವ ಆತ್ಮವಿಶ್ವಾಸವೂ ಇದೆ

'ಆಂದೋಲನ' ಸಂದರ್ಶನದಲ್ಲಿ ನೂತನ ಸಚಿವರಾದ ಡಾ.ಗೀತಾ ಮಹದೇವಪ್ರಸಾದ್

ಮುಳ್ಳೂರು ಶಿವಪ್ರಸಾದ್

ಮೈಸೂರು,ಸೆ.೨– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ದ್ವಿತೀಯ ಮಹಿಳಾ ಸಚಿವರಾಗಿರುವ ಹೇಗೂ ಮೈಸೂರು ಭಾಗದ ಏಕೈಕ ಮಹಿಳಾ ಶಾಸಕಿಯೂ ಆಗಿರುವ ಡಾ.ಗೀತಾ ಮಹದೇವಪ್ರಸಾದ್ (ಎಂ.ಸಿ.ಮೋಹನಕುಮಾರಿ) ತಮ್ಮ ರಾಜಕೀಯ ಬೆಳವಣಿಗೆಗೆ ತಾವೇ ಅಚ್ಚರಿಗೊಂಡಿದ್ದಾರೆ. ಅದೇ ವೇಳೆ ಪತಿ ದಿ.ಎಚ್.ಎಸ್.ಮಹದೇವಪ್ರಸಾದ್ ಸಚಿವರಾಗಿ ಮಾಡಿರುವ ಜನಸೇವೆಯ ಫಲ ತಮಗೆ ದಕ್ಕಿದೆ. ಅದನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂಬ ಆತ್ಮವಿಶ್ವಾಸದೊಂದಿಗೆ ಜನಸೇವೆಗೆ ಮುಂದಾಗಲು ನಿರ್ಧರಿಸಿದ್ದಾರೆ.

ಮಹದೇವ ಪ್ರಸಾದ್ ಅವರ ಅಕಾಲಿಕ ಮರಣದಿಂದ ತೆರವಾದ ಗುಂಡ್ಲುಪೇಟೆ ಕ್ಷೇತ್ರಕ್ಕೆ ಕೇವಲ ನಾಲ್ಕು ತಿಂಗಳ ಹಿಂದೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ ಗೀತಾ ಅವರು, ಇದೀಗ ಸಕ್ಕರೆ ಹಾಗೂ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರಾಗಿದ್ದಾರೆ. ಈ ಹೊಸ ಜವಾಬ್ದಾರಿ, ಕ್ಷೇತ್ರ, ರಾಜ್ಯದ ಅಭಿವೃದ್ಧಿಗೆ ಪೂರಕವಾದ ತಮ್ಮ ಕನಸುಗಳನ್ನು 'ಆಂದೋಲನ'

ತಾಯಿ ಅವರ ನಾಲ್ಕು ತಿಂಗಳ ಕಾರ್ಯವೈಖರಿ ಜೊತೆಗೆ ತಂದೆಯವರ ಸೇವೆಯನ್ನು ಪರಿಗಣಿಸಿ ಬಹುಶಃ ಸಿದ್ದರಾಮಯ್ಯ ಅವರು ಸಚಿವ ಸ್ಥಾನ ನೀಡಿರಬಹುದು.

–ಎಚ್.ಎಂ.ಗಣೇಶ್ ಪ್ರಸಾದ್

ದಿನಪತ್ರಿಕೆಗೆ ನೀಡಿದ 'ಸಂದರ್ಶನ'ದಲ್ಲಿ ಹಂಚಿಕೊಂಡಿದ್ದಾರೆ.

ಪ್ರಶ್ನೆ: ಸಕ್ಕರೆ ಖಾತೆ ನಿಮಗೆ ದೊರೆತಿದ್ದು, ಅದರ ಬಗ್ಗೆ ನಿಮ್ಮ ಚಿಂತನೆ?

ಇದು ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ನಡುವೆ ಸಾಮರಸ್ಯದಿಂದ ಕಾಪಾಡಬೇಕಾದ ಕ್ಷೇತ್ರವಾಗಿದೆ. ರೈತರ ಕಷ್ಟಗಳನ್ನು ಅರಿತು, ಅವುಗಳ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಕಾರ್ಖಾನೆಗಳು, ರೈತರು ಪರಸ್ಪರ ಆಧಾರವಾಗಿದ್ದಾರೆ. ಇಬ್ಬರ ಬೇಡಿಕೆಗಳನ್ನು ಈಡೇರಿಸುವ ಸಂದರ್ಭದಲ್ಲಿ ಒಮ್ಮೆ ಕಾರ್ಖಾನೆ ಮಾಲೀಕರು, ಮತ್ತೊಮ್ಮೆ ಕಬ್ಬು ಬೆಳೆಗಾರರು ಪರಿಸ್ಥಿತಿಯನ್ನು ಅರಿತು ಸೋತು ಗೆಲ್ಲಬೇಕಾಗುತ್ತದೆ. ಅದರಿಂದ ಇಬ್ಬರೂ ಒಳ್ಳೆಯದಾಗುತ್ತದೆ.

⏭ ೮

ಜನಪ್ರಿಯ ಸಿನಿಮಾ ತಾರೆ ಮತ್ತು ಟ್ರಾಂಡ್ ರಾಯಭಾರಿ – ಜುವೆಲ್ಸ್ ಆಫ್ ಇಂಡಿಯಾ, ಮೈಸೂರು – 2017
ಪ್ರಣಿತಾ ಸುಭಾಷ್ ಸ್ವಾಗತಿಸುತ್ತಿದ್ದಾರೆ
Jewels of India Mysuru
ಭಾರತದ ದೊಡ್ಡ ಮತ್ತು ಉತ್ತಮ ಆಭರಣಗಳ ಪ್ರದರ್ಶನ ಹಾಗೂ ಮಾರಾಟ
ಸ್ಥಳ: @ ಹೊಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜ, ಎಂ.ಜಿ ರಸ್ತೆ, ಮೈಸೂರು. (ಮಾಲ್ ಆಫ್ ಮೈಸೂರ ಪಕ್ಕದಲ್ಲಿ)
Valet Parking Available
ಪ್ರದರ್ಶನ ದಿನಾಂಕ: ಸೆಪ್ಟೆಂಬರ್ 1, 2 ಮತ್ತು 3, 2017.
ಶುಕ್ರವಾರ, ಶನಿವಾರ, ಭಾನುವಾರ – ಬೆಳಗ್ಗೆ 10.00 ರಿಂದ ರಾತ್ರಿ 8.00ರ ವರೆಗೆ

ಮಂತ್ರ ಮುಗ್ಧಗೊಳಿಸುವ ಅತ್ಯಂತ ಶಿಸಿಲು ಶ್ರ